ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER:

ದಿನಾಂಕ : DATE : 7/4/21

## ಪಂಚರಾಜ್ಯ ಪಾಂಚಜನ್ಯ

ವಿಧಾನಸಭೆ ಚುನಾವಣೆಯನ್ನು ಎದುರಿಸುತ್ತಿರುವ 5 ರಾಜ್ಯಗಳ ಪೈಕಿ ತಮಿಳುನಾಡು, ಕೇರಳ ಹಾಗೂ ಪುದುಚೇರಿಯಲ್ಲಿ ಮಂಗಳವಾರ ಒಂದೇ ಹಂತದಲ್ಲಿ ಮತದಾನ ಪೂರ್ಣಗೊಂಡಿದ್ದು, ಕ್ರಮವಾಗಿ ಶೇ.63.47, ಶೇ.69.95 ಹಾಗೂ ಶೇ.77.90 ಮತದಾನ ದಾಖಲಾಗಿದೆ. ಅಸ್ಸಾಂ ನಲ್ಲಿ ಕೊನೆಯ ಹಂತದ ಹಕ್ಕು ಚಲಾವಣೆ ಶಾಂತಿಯುತವಾಗಿ ನಡೆದರೆ, ಪಶ್ಚಿಮ ಬಂಗಾಳದಲ್ಲಿ 3ನೇ ಹಂತದ ಮತದಾನದಲ್ಲಿ ಹಲವೆಡೆ ಹಿಂಸಾಚಾರ ಘಟನೆಗಳು ವರದಿಯಾಗಿವೆ. ಪಂಚರಾಜ್ಯಗಳ ಪೈಕಿ ಬಂಗಾಳ ಹೊರತುಪಡಿಸಿ ಉಳಿದ ರಾಜ್ಯಗಳ ಮತ ಸಮರಕ್ಕೆ ತೆರೆ ಬಿದ್ದಿದೆ.

# 4 ರಾಜ್ಯ ಮುಗೀತು; ಇನ್ನೊಂದೇ ಬಾಕಿ

### 'ಶಬರಿಮಲೆ' ಜಪದಲ್ಲೇ ಮತ

**ಕೇರಳ**

ಎಲ್ಲರೂ ಹುರುಪಿನಿಂದ ಬಂದು ಹಕ್ಕು ಚಲಾಯಿಸಿದ ಕಾರಣ, ಶೇ.69.95ರಷ್ಟು ಮತದಾನ ದಾಖಲಾಗಿ, ಶಾಂತಿಯುತವಾಗಿ ಮುಗಿದಿದೆ. ಪ್ರಚಾರದುದ್ದಕ್ಕೂ ಕೇಳಿ ಬಂದ 'ಶಬರಿಮಲೆ' ವಿಚಾರ ಮತದಾನದ ದಿನವೂ ಕೇರಳಿಗರನ್ನು ಬಿಡಲಿಲ್ಲ. ಅಯ್ಯಪ್ಪ ಸ್ವಾಮಿ ಸೇರಿ ಎಲ್ಲ ದೇವರೂ ಎಲ್‌ಡಿಎಫ್ ಪರವಿದ್ದಾರೆ ಎಂದು ಸಿಎಂ ಪಿಣರಾಯಿ ಹೇಳಿದ್ದರೆ, ಎಡರಂಗದ ಸರ್ಕಾರವು ಅಯ್ಯಪ್ಪನ ಆಕ್ರೋಶಕ್ಕೆ ತುತ್ತಾಗಲಿದೆ ಎಂದು ಕಾಂಗ್ರೆಸ್, ಶಬರಿಮಲೆ ವಿಚಾರದಲ್ಲಿ ಸಿಎಂ ಮಾಡಿದ ಹೀನ ಕೃತ್ಯವನ್ನು ಜನ ಮರೆಯಲಾರರು ಎಂದು ಬಿಜೆಪಿ ಹೇಳಿದೆ.

### ಡಿಎಂಕೆ-ಎಐಎಡಿಎಂಕೆ ಪರಸ್ಪರ ದೂರು

[redacted]

ತಮಿಳುನಾಡಿನ ಎಲ್ಲ 234 ಕ್ಷೇತ್ರಗಳಿಗೆ ಮತದಾನ ಶಾಂತಿಯುತವಾಗಿ ಪೂರ್ಣಗೊಂಡಿದೆ. ಇಲ್ಲಿ ಐಎಡಿಎಂಕೆ ಮತ್ತು ಡಿಎಂಕೆ ನಡುವೆ ನೇರ ಫೈಟ್ ಇದೆ. ಪಕ್ಷದ ಚಿಹ್ನೆಯಿರುವ ಟೀಶರ್ಟ್ ಧರಿಸಿ ಹಕ್ಕು ಚಲಾಯಿಸಿದ ಡಿಎಂಕೆ ನಾಯಕ ಉದಯನಿಧಿ ವಿರುದ್ಧ ಎಐಎಡಿಎಂಕೆ ದೂರು ನೀಡಿದ್ದರೆ, ಕಾರಿನಲ್ಲಿ ಪಕ್ಷದ ಧ್ವಜ ಹಾಕಿಕೊಂಡು ಬಂದ ಬಿಜೆಪಿಯ ಖುಷ್ಬೂ ಸುಂದರ್ ವಿರುದ್ಧ ಡಿಎಂಕೆ ದೂರು ದಾಖಲಿಸಿದೆ.



ಹಕ್ಕುಚಲಾಯಿಸಲು ಸೈಕಲ್ ಏರಿ ಬಂದ ನಟ ವಿಜಯ್.

### ಶಾಂತಿಯುತ ಮತದಾನ

**ಅಸ್ಸಾಂ**

12 ಜಿಲ್ಲೆಗಳ 40 ಕ್ಷೇತ್ರಗಳಲ್ಲಿ ಬಿಗಿಭದ್ರತೆಯ ನಡುವೆ ನಡೆದ ಮತದಾನ ಶಾಂತಿಯುತ ವಾಗಿ ಪೂರ್ಣಗೊಂಡಿದೆ. ಸಂಜೆ 5ರವರೆಗೆ ಶೇ.79 ರಷ್ಟು ಮತದಾನ ದಾಖಲಾಗಿದೆ. ಪುದುಚೇರಿಯಲ್ಲೂ ಯಾವುದೇ ಅಹಿತಕರ ಘಟನೆಯಿಲ್ಲದೇ ಮತ ಸಮರಕ್ಕೆ ಪೂರ್ಣವಿರಾಮ ಬಿದ್ದಿದೆ.

### ಹಿಂಸೆ, ಮಾರಾಮಾರಿ

**ಪಶ್ಚಿಮ ಬಂಗಾಳ**

ಈ ಹಿಂದಿನ 2 ಹಂತಗಳಂತೆಯೇ 3ನೇ ಹಂತದಲ್ಲೂ ಹಲವೆಡೆ ಹಿಂಸಾಚಾರ ಪ್ರಕರಣಗಳು ವರದಿಯಾಗಿವೆ. ಆರಂಬಾಗ್‌ನಲ್ಲಿ ಟಿಎಂಸಿ-ಬಿಜೆಪಿ ಕಾರ್ಯಕರ್ತರ ನಡುವೆ ಮಾರಾಮಾರಿ ನಡೆದಿದೆ. ಬಿಜೆಪಿ ಕಾರ್ಯಕರ್ತರು ತಮ್ಮ ಮೇಲೆ ಹಲ್ಲೆ ನಡೆಸಿದ್ದಾಗಿ ಟಿಎಂಸಿ ಅಭ್ಯರ್ಥಿಗಳಿಬ್ಬರು ಆರೋಪಿಸಿದ್ದಾರೆ. ಟಿಎಂಸಿ ನಾಯಕನ ಮನೆಯಲ್ಲಿ 4 ಇವಿಎಂ, ವಿವಿಪ್ಯಾಟ್ ಪತ್ತೆಯಾಗಿದ್ದು, ಚುನಾವಣಾ ಅಧಿಕಾರಿಯೊಬ್ಬರನ್ನು ಅಮಾನತು ಮಾಡಲಾಗಿದೆ. ಘರ್ಷಣೆ, ಆರೋಪ- ಪ್ರತ್ಯಾರೋಪಗಳ ನಡುವೆಯೂ ಬಂಗಾಳದಲ್ಲಿ ಶೇ.77.68 ಮತದಾನ ದಾಖಲಾಗಿದೆ.